ಅಧ್ಯಕ್ಷರು:– ಪಟ್ಟಿಯನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):–

ಮಾನ್ಯ ಅಧ್ಯಕ್ಷರೆ, 1984ನೇ ಇಸವಿಯ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳು (ಕ್ಯಾಪಿಟೇಷನ್ ಶುಲ್ಕದ ನಿರ್ಬಂಧ ಅಧಿನಿಯಮದ 14ನೇ ಕಲಮಿನ ಮೇರೆಗೆ:

1993ನೇ ಇಸವಿಯ ಇಂಜಿನೀಯರಿಂಗ್, ವೈದ್ಯಕೀಯ, ದಂತ, ಫಾರ್ಮಸಿ ಹಾಗೂ ಶಿಶ್ರೂಷಾ ತರಗತಿಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ 10–3–1993 ರಂದು ಹೊರಡಿಸಲಾದ ಇಡಿ:33:ಟಿಎ:ಎಸ್ಇ:6:92ರ ಕ್ರಮಾಂಕದ ಅಧಿಸೂಚನೆಯನ್ನು ಉನ್ನತ ಶಿಕ್ಷಣ ಸಚಿವರಾದ ಶ್ರೀ ಮಾನ್ಯ ಎಸ್.ಎಂ. ಯಾಹ್ಯಾರವರ ಪರವಾಗಿ ಮಂಡಿಸುತ್ತಿದ್ದೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಎಂ. ಪುಟ್ಟಸ್ವಾಮಿಗೌಡ (ಅಧ್ಯಕ್ಷರು, ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿ):–

ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಸಭೆಯ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ 7ನೇ 8ನೇ 9ನೇ 10ನೇ 11ನೇ 12ನೇ 13ನೇ 14ನೇ ಮತ್ತು 15ನೇ ವರದಿಗಳನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ಬಂಗಾರಪೇಟೆ ತಾಲ್ಲೂಕಿನಲ್ಲಿ ಚಿರತೆಯಿಂದ ಹತ್ತು ಜನ ಸತ್ತಿರುವುದರ ಬಗ್ಗೆ

† ಶ್ರೀ ಎಂ.ನಾರಾಯಣಸ್ವಾಮಿ (ಬೇತಮಂಗಲ):– ಮಾನ್ಯ ಅಧ್ಯಕ್ಷರೆ, ನಮ್ಮ ಬಂಗಾರಪೇಟೆ ತಾಲ್ಲೂಕಿನಲ್ಲಿ ಭಾನುವಾರ ಒಂದು ಚಿರತೆ ಬಂದಿತ್ತು. ಆ ದಿನ ನಾವು ಅರಣ್ಯ ಇಲಾಖೆಗೆ ಮೆಸೇಜ್ ಕೊಟ್ಟು ತಾವು ಬರಬೇಕು ಅದನ್ನು ಹಿಡಿಯಬೇಕು ಎಂದು ಹೇಳಿದೆವು. ಆದರೂ ಕೂಡ ಅವರು ಬರಲಿಲ್ಲ. ಅದು ಹತ್ತು ಜನರನ್ನು ಕಚ್ಚಿ ಸಾಯಿಸಲಿಕ್ಕೆ ಪ್ರಯತ್ನ ಮಾಡಿತ್ತು. ಈ ಬಗ್ಗೆ ಹೇಳುವುದಕ್ಕೆ ನನಗೆ ಎರಡು ನಿಮಿಷ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬಂಗಾರಪೇಟೆ ತಾಲ್ಲೂಕಿನ ಮೋತಕಪಲ್ಲಿ ಎಂಬ ಗ್ರಾಮಕ್ಕೆ ಬೆಳಿಗ್ಗೆ ಹತ್ತೂವರೆ ಗಂಟೆ ಸಮಯಕ್ಕೆ ಒಂದು ಚಿರತೆ ಬಂತು. ಅದು ಬಂದ ಮೇಲೆ ಅರಣ್ಯ ಇಲಾಖೆಯವರಿಗೆ ಫೋನ್ ಮೂಲಕ ಸುದ್ದಿ ಮುಟ್ಟಿಸಿದೆವು; ಆದರೆ ಅರಣ್ಯ ಇಲಾಖೆಯವರು 5 ಗಂಟೆಯವರೆಗೆ ಬರಲಿಲ್ಲ. 5 ಗಂಟೆಗೆ ಎಸ್.ಪಿ.ಯವರಿಗೆ ಮೆಸೇಜ್ ಕೊಟ್ಟು 100–120ಜನ ಪೋಲೀಸರನ್ನು ಕರೆಸಿಕೊಂಡು ಚಿರತೆಯನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿದೆವು. ಆದರೆ ಅದು ಇಬ್ಬರು ಪೋಲೀಸರು ಮತ್ತು ಎಂಟು ಜನ ಬೇರೆಯವರನ್ನು ಹೀಗೆ ಒಟ್ಟು ಹತ್ತು ಜನರನ್ನು ಕಚ್ಚಿ ಗಾಯಗೊಳಿಸಿದೆ. ಆದರ ಬಗ್ಗೆ ಇಲಾಖೆಯ ವತಿಯಿಂದ, ಸರ್ಕಾರದ ವತಿಯಿಂದ ಸೌಜನ್ಯಕ್ಕಾದರೂ ನನ್ನ ಕ್ಷೇತ್ರಕ್ಕೆ ಭೇಟಿ ಕೊಟ್ಟು ಏನು ವಿಷಯ ನಡೆದಿದೆ. ನಿಜವೇ ಸುಳ್ಳೇ ಎಂದು ಪರಿಶೀಲಿಸತಕ್ಕ ಕೆಲಸ ಸರ್ಕಾರದಿಂದ ಆಗಲಿಲ್ಲ. ಅರಣ್ಯ ಇಲಾಖೆಯ ಅಧಿಕಾರಿಗಳು ಇದುವರೆಗೆ ಭೇಟಿ ಕೊಡಲಿಲ್ಲ. ಯಾರಿಗೆ ಏನು ಗಾಯಗಳಾಗಿವೆ, ಅವರಿಗೆ ಸರ್ಕಾರದಿಂದ ಏನು ಪರಿಹಾರ ಕೊಡಬೇಕು ಅದನ್ನು ಕೊಡತಕ್ಕ ಕೆಲಸ ಕೂಡ ಆಗಿಲ್ಲ. ಹೀಗೆ 4 ತಿಂಗಳ ಹಿಂದೆ ಬೂದಿಕೋಟೆ ಹತ್ತಿರ ಚಿರತೆಯನ್ನು ಕಂಡಾಗ ನಾವು ಸರ್ಕಾರಕ್ಕೆ ಸುದ್ದಿ ಮುಟ್ಟಿಸಿದ್ದೇವೆ. ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರ ಗಮನಕ್ಕೂ

ತಂದಿದ್ದೇವೆ. ಆಗ ಇಬ್ಬರಿಗೆ ಗಾಯವಾಗಿದ್ದರೂ ಸಹ ಸರ್ಕಾರ ಕಣ್ತೆರೆದು ನೋಡಲಿಲ್ಲ. ಇದರ ಬಗ್ಗೆ ಅರಣ್ಯ ಇಲಾಖೆ ಏನು ಕ್ರಮ ತೆಗೆದುಕೊಳ್ಳುತ್ತದೆ? ಜನ ಏನು ನೊಂದಿದ್ದಾರೆ, ಏನು ಗಾಯಗೊಂಡಿದ್ದಾರೆ ಅವರಿಗೆ ಪರಿಹಾರ ಕೊಡತಕ್ಕ ಕೆಲಸ ಸರ್ಕಾರದ ವತಿಯಿಂದ ಆಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಈ ವಿಷಯವನ್ನು ಪರಿಶೀಲನೆ ಮಾಡಿ ಹೇಳಿಕೆ ಕೊಡುವುದಕ್ಕೆ ಮಾನ್ಯ ಅರಣ್ಯ ಮಂತ್ರಿಗಳಿಗೆ ತಿಳಿಸುತ್ತೇನೆ.

ಗೋಕಾಕ್ ನಗರಸಭೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ

† ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ನಾನು ಗೋಕಾಕ್ ನಗರಸಭೆ ವಿಚಾರದಲ್ಲಿ ತಮ್ಮ ಅನುಮತಿ ತೆಗೆದುಕೊಂಡು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸಿಂಧ್ಯರವರು, ಶಿವಾನಂದ ಕೌಜಲಗಿಯವರು ಮತ್ತು ಸಿದ್ದನಗೌಡರು ಸಹ ಇದರ ಬಗ್ಗೆ ಬೆಳಕನ್ನು ಚೆಲ್ಲಬಹುದು. ನಾನು ಈ ಹಿಂದೆ ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದೆ. ಆದರೆ ಇಂಥ ಒಂದು ನಗರಸಭೆಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರ ವಿರುದ್ಧ ಕೆಲಸ ನಡೆಯುತ್ತಿದೆ ಎಂದು ಭಾವಿಸಿರಲಿಲ್ಲ. ರಾಜ್ಯದ ಯಾವ ನಗರಸಭೆಯಲ್ಲೂ ಈ ಪ್ರಕಾರ ನಡೆಯುತ್ತಿಲ್ಲವೆಂದು ನನ್ನ ಭಾವನೆ. ಅಲ್ಲಿ ಏನಾಗಿದೆ ಎಂದರೆ ಅಲ್ಲಿನ ಅಧ್ಯಕ್ಷರು ಕಂಟ್ರಾಕ್ಟರ್ ಕೈಗೊಂಬೆಯಾಗಿದ್ದಾನೆ. ಅಲ್ಲಿ ಒಬ್ಬ ದೊಡ್ಡ ಎಕ್ಸೈಜ್ ಕಂಟ್ರಾಕ್ಟರ್ ಸತೀಶ್ ಜಾರ್‌ಚಿಗಳಿ ಎಂದು ಇದ್ದಾರೆ. ಅವರ ಆಶ್ರಯದಲ್ಲಿ ಅವರ ಆಜ್ಞೆ ಮೇಲೆ ಮುನಿಸಿಪಾಲಿಟಿ ನಡೆಯುತ್ತಿದೆ ಸರಿಯಾಗಿ ಆಶ್ರಯ ಇದ್ದರೆ ನಡೆಯಲಿ, ಬೇಡ ಎನ್ನುವುದಿಲ್ಲ. ಸರಿಯಾದ ಆಜ್ಞೆ ಮಾರ್ಗದರ್ಶನ ಇದ್ದರೆ ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಏನಾಗುತ್ತಿದೆ ಎಂಬುದಕ್ಕೆ 2–3 ಉದಾಹರಣೆಗಳನ್ನು ಮಾತ್ರ ಕೊಡುತ್ತೇನೆ. ಬಡವರ ಸಲುವಾಗಿ, ಪರಿಶಿಷ್ಟ ಜಾತಿ ಜನರ ಸಲುವಾಗಿ 1987ರಲ್ಲಿ 28 ಎಕರೆ ಭೂಮಿಯನ್ನು ಹರಾಜು ಮಾಡಬೇಕೆಂದು 17–11–87ಕ್ಕೆ ಮುಂಚಿನ ಬೋರ್ಡಿನಲ್ಲಿ ನಿರ್ಣಯವಾಯಿತು. ನಿರ್ಣಯ ಆದನಂತರ ಮುನಿಸಿಪಾಲಿಟಿಯವರು 5,97,999ರ ರೂಪಾಯಿಗಳನ್ನು ಜಮಾ ಮಾಡಿದರು. ಹಣ ಜಮಾ ಆಯಿತು. 4(1) ನೋಟಿಫಿಕೇಷನ್ ಆಯಿತು, 6(1) ನೋಟಿಫಿಕೇಷನ್ ಆಯಿತು. ಆದಾದ ನಂತರ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ಬಡವರಿಗೆ ಹಂಚಬೇಕು. ಈ ಅವಧಿಯಲ್ಲಿ ಅವರು ಏನು ಮಾಡಿದರು ಅಂದರೆ, ಆ ಭೂಮಿಯನ್ನು ಅಕ್ವೈರ್ ಮಾಡುವ ಅವಶ್ಯಕತೆ ಇಲ್ಲವೆಂದು ರೆಸಲ್ಯೂಷನ್ ಮಾಡಿದರು.

ರೆಸಲ್ಯೂಷನ್ ಮಾಡಿ ಯಾವ ಹಳೇ ಮಾಲೀಕರಿದ್ದಾರಲ್ಲಾ ಅವರಿಗೆ ಹೆದರಿಸಿದ್ದಾರೆ, ಬೆದರಿಸಿದ್ದಾರೆ. ಹೀಗೀಗೆ ನಿಮ್ಮ ಭೂಮಿ ಅಕ್ವೈರ್ ಆಗುತ್ತದೆ, ನೀವು ಬೇರೆಯವರಿಗೆ ಮಾರಾಟ ಮಾಡಿ ಎಂದು ಹೇಳಿದರು. ಈ ಸತೀಶ್ ಇದ್ದಾರಲ್ಲಾ ಅವರ ಸಂಬಂಧೀಕರು, ಫ್ರೆಂಡ್ಸ್ ಸೇರಿ ಬೇನಾಮಿ ಹೆಸರಿನಲ್ಲಿ ಈ ಭೂಮಿ ತೆಗೆದುಕೊಂಡಿದ್ದಾರೆ. ತೆಗೆದುಕೊಂಡ ನಂತರ ಭೂಮಿ ಡೀನೋಟಿಫೈ ಆಯಿತು. ಡೀನೋಟಿಫೈ ಆದ ನಂತರ ಪ್ರತಿಯೊಂದು ಎಕರೆಗೆ 40 ಸಾವಿರ ರೂಪಾಯಿ ತೆಗೆದುಕೊಂಡಿದ್ದಾರೆ. ಆದಾದನಂತರ ಹೊಸದಾಗಿ ಏನು ಮಾಡಿದ್ದಾರೆ ಎಂದರೆ, ಏನು ಬಡವರ ಸಲುವಾಗಿ ಆ ಅಕ್ವೈರ್ ಆಗುವ ಭೂಮಿ ಇತ್ತು ಅದನ್ನು ಹಳೇ ಮಾಲೀಕರು ಯಾರಿದ್ದಾರೆ ಅವರಿಂದ ಬೇನಾಮಿ ಜನರಿಗೆ ಮಾರಾಟ ಮಾಡಿ, ಮುನಿಸಿಪಾಲಿಟಿಗೆ ಲೇಔಟ್ ಪ್ಲಾನ್ ಮಾಡಿ ಪ್ಲಾಟ್ ಮಾಡುವುದಕ್ಕೆ ಇವರು ಅರ್ಜಿ ಸಲ್ಲಿಸಿದ್ದಾರೆ; ಅದನ್ನು ಮುನಿಸಿಪಾಲಿಟಿಯವರು ಒಪ್ಪಿಕೊಂಡಿದ್ದಾರೆ. ಮುನಿಸಿಪಾಲಿಟಿ ಒಪ್ಪಿಕೊಂಡು ಗುಂಟಾಗೆ 50–60 ಸಾವಿರ ರೂಪಾಯಿ ಪ್ರಕಾರ ಪ್ಲಾಟ್ ಮಾಡುವುದಕ್ಕೆ ವ್ಯವಸ್ಥೆ